**37 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು**

**ಸಿ.ಸಿ. ನಂ. 23978/2018**

**ಫ್ರಾ.ಸಃ 1 ಚಾ.ಸಃ 1**

| | |
|---|---|
| **ಸಾಕ್ಷಿದಾರರ ಹೆಸರು** | ರಾಜಶೇಖರ್ ಬಿ.ಎನ್ |
| **ತಂದೆಯ/ಗಂಡನ ಹೆಸರು** | ನಂಜುಂಡಯ್ಯ |
| **ವಯಸ್ಸು** | 50 ವರ್ಷ |
| **ಉದ್ಯೋಗ** | ಖಾಸಗಿ ಕೆಲಸ |
| **ವಿಳಾಸ** | ಬನಶಂಕರಿ, ಬೆಂಗಳೂರು. |
| **ಪ್ರ ವ ಬೋ ದಿನಾಂಕ** | 14/06/2023 |

**ಮುಖ್ಯ ವಿಚಾರಣೆಃ ಹಿ.ಸ.ಸ. ಅ ರವರಿಂದಃ**

**1.**ದಿ. 14/09/2017 ರಂದು ಸಂಜೆ 05.45 ಗಂಟೆ ಸಮಯದಲ್ಲಿ ನಾಗಸಂದ್ರ ಸರ್ಕಲ್ ನಲ್ಲಿರುವ ಸಾಯಿಬಾಬಾ ದೇವಸ್ಥಾನದ ಹತ್ತಿರ ನನ್ನ ದ್ವಿ ಚಕ್ರ ವಾಹನ ಹೀರೋ ಹೋಂಡಾ ಸ್ಪೆಂಡರ್ ಕೆಎ 05 ಹೆಚ್.ಜಿ 1071 ನ್ನು ನಿಲ್ಲಿಸಿಕೊಂಡು ನನ್ನ ಮೊಬೈಲನಲ್ಲಿ ಮಾತನಾಡುತ್ತಿದ್ದೆ. ಆಗ ಇಬ್ಬರೂ ಅಪರಿಚಿತ ವ್ಯಕ್ತಿಗಳು ಬಿಳಿ ಬಣ್ಣದ ಆ್ಯಕ್ಟಿವಾ ಹೊಂಡಾ ಮೋಟಾರು ಸೈಕಲ್ ನಲ್ಲಿ ಬಂದು ನನ್ನ ವಾಹನಕ್ಕೆ ತಾಕಿಸಿರುತ್ತಾರೆ. ನಂತರ ಅವರುಗಳು ನನ್ನ ಬಳಿ ಬಂದು ನನ್ನ ಫೋನ್ ಕೊಡುವಂತೆ ಕೇಳಿದರು. ನಾನುಮೊಬೈಲ್ ಕೊಡುವುದಿಲ್ಲ ಎಂದು ಹೇಳಿದಾಗ ಆ ವ್ಯಕ್ತಿಗಳು ನನ್ನ ಮೋಟಾರು ಸೈಕಲ್ ಗೆ ಕಾಲಿನಿಂದ ಒದ್ದಿರುತ್ತಾರೆ. ನಂತರ ಈಗ ನ್ಯಾಯಲಯದ ಮುಂದಿರುವ ಆರೋಪಿ ನನ್ನ ಮುಖಕ್ಕೆ ಕೈಯಿಂದ ಹೊಡೆದಿರುತ್ತಾನೆ. ನಂತರ ನಾನು 100 ನಂಬರಿಗೆ ಕಾಲ್ ಮಾಡಲು ಹೋಗುತ್ತಿದ್ದಾಗ ಆರೋಪಿ ಕಲ್ಲಿನಿಂದ ನನ್ನ ಕುಂಡಿಗೆ ಹೊಡೆದಿರುತ್ತಾರೆ. ನಂತರ ಆರೋಪಿತರೊಂದಿಗೆ ಇದ್ದ ಇನ್ನೊಬ್ಬ ವ್ಯಕ್ತಿ ನನ್ನ ಜೇಬಿನಲ್ಲಿದ್ದ ರೂ. 1700/- ಹಣ ಮತ್ತು ಡಿಎಲ್ ನ್ನು ಕಿತ್ತುಕೊಂಡು ಹೋಗಿರುತ್ತಾನೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ಅದನ್ನು **ನಿಪಿ.1** ಎಂದು ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು. ನಂತರ ಮಾರನೇ ದಿನ ಪೊಲೀಸರು ಕೃತ್ಯ ಸ್ಥಳಕ್ಕೆ ಬಂದಿದ್ದು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನೊಡುತ್ತಿದ್ದು ಅದನುನ **ನಿಪಿ.2** ಎಂದು ಸಾಕ್ಷಿಯ ಸಹಿಯನ್ನು **ನಿಪಿ.2(ಎ)** ಎಂದು

ಗುರುತಿಸಲಾಯಿತು. ನನಗೆ ಹೊಡೆದ ವ್ಯಕ್ತಿಯನ್ನು ಈಗ ನ್ಯಾಯಲಯದ ಮುಂದೆ ನೋಡಿ ಗುರುತಿಸುತ್ತೇನೆ. ನಂತರ ಪೊಲೀಸರಿಗೆ ಹೇಳಿಕೆ ಸಹ ಕೊಟ್ಟಿರುತ್ತೇನೆ. ಈ ಹಂತದಲ್ಲಿ ಮು.ಮಾಲನ್ನು ಗುರುತಿಸುವಿಕೆಗಾಗಿ ಹಿ.ಸ.ಸ.ಅ ರವರು ಸಮಯವಕಾಶ ಕೋರಿದ್ದರ ಕಾರಣ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

**ಓ.ಹೇ. ಕೇ. ಸ. ಇ. ಒ**

**37 ನೇ ಅ.ಮು. ಮ. ದಂ. ನ್ಯಾ.**